## ಸೀನ್, ಸೀನು

ಭಾನುವಾರ ರಜೆ ದಿನವಾದ್ದರಿಂದ ಬೇಸರ ಕಳೆಯಲು ಸಿನಿಮಾ ನೋಡುತ್ತಾ ಕುಳಿತೆ. ಆ ಸಿನಿಮಾ ನನಗೆ ಅಷ್ಟಾಗಿ ರುಚಿಸಲಿಲ್ಲ.

ಅದೇ ಸಮಯಕ್ಕೆ ಪಕ್ಕದ ಮನೆಯ ಚಿಂಟು ನನ್ನೊಡನೆ ಸಿನಿಮಾ ನೋಡುತ್ತಾ ಕುಳಿತ. ಒಳ್ಳೆ ಸೀನ್ (scene) ಇದ್ದರೆ ಸಿನಿಮಾ ಚೆನ್ನಾಗಿ ಓಡುತ್ತದೆ. (Success full running) ಎಂದೆ. ನನ್ನ ಮಾತನ್ನು ಕೇಳಿಸಿಕೊಂಡ ಚಿಂಟು ಅಕ್ಕ ನೀನು ಸೀನುವುದಕ್ಕೂ (ಅಕ್ಷಿ) ಸಿನೆಮಾ ಓಡುವುದಕ್ಕೂ (Success full running) ಸಂಬಂಧವೇನು? ಎಂದಾಗ ನನಗೆ ನಿಜಕ್ಕೂ ಸೀನು (ಅಕ್ಷಿ) ಬಂದಿತ್ತು.

**ದೀಪಶ್ರೀ ಎಸ್. ಕೂಡ್ಲಿಗಿ**



---

## ಬಿಸಿಬಿಸಿಯಾಗಿದೆ ತೊಗೊಳ್ಳಿ!

ನನ್ನ ಸೊಸೆ ಆಕಾಂಕ್ಷ ಎಲ್ಲಾ ಕೆಲಸಗಳನ್ನು ಸರಾಗವಾಗಿ ನಿಭಾಯಿಸಬಲ್ಲ ಚತುರೆ.

ನನ್ನ ಅತ್ತೆ ತೀರಿಹೋದ ಸಂದರ್ಭ ಹನ್ನೆರಡನೆಯ ದಿನದ ಶುದ್ಧೀಕರಣಕ್ಕೆಂದು ಪಂಚಗವ್ಯಕ್ಕಾಗಿ ಹಸುವಿನ ಸೆಗಣಿ ಬೇಕಾಗಿತ್ತು. ಅದೂ ಈ ಬೆಂಗಳೂರಿನಲ್ಲಿ ಸಿಗುವುದು ದುರ್ಲಭ. ಅಂತಹದರಲ್ಲಿ ಅವಳು ಹುಡುಕಾಡಿ ತೆಗೆದುಕೊಂಡು ಬಂದವಳೇ 'ಅಮ್ಮಾ, ಬಿಸಿಬಿಸಿಯಾಗಿ ಫ್ರೆಶ್ ಆಗಿದೆ ತೊಗೊಳ್ಳಿ' ಎನ್ನುತ್ತಾ ಒಂದು ಡಬ್ಬಿಯ ತುಂಬಾ ಸೆಗಣಿಯನ್ನು ನನ್ನ ಕೈಯಲ್ಲಿಟ್ಟಳು!.

ತಿಂಡಿ ಮಾಡಿದಾಗ ಯಾವಾಗ್ಲೂ 'ಬಿಸಿಬಿಸಿಯಾಗಿದೆ ತಿಂದುಬಿಡಿ ಅಮ್ಮ' ಅನ್ನುವುದು ಅವಳ ರೂಢಿ. ಅವಳು ಹೇಳಿದ ಪರಿಗೆ ನೆರೆದಿದ್ದ ನೆಂಟರೆಲ್ಲಾ ಜೋರಾಗಿ ಬಿದ್ದುಬಿದ್ದು ನಕ್ಕರು.



ಕಲೆ: ಗಣೇಶ ಆಚಾರ್ಯ

ನನಗೂ ನಗೆ ತಡೆಯಲಾಗಲಿಲ್ಲ. ಪರಿಸ್ಥಿತಿ ಅರಿವಾಗಿ ಮೊದಲೇ ಕೆಂಪಗಿದ್ದ ಅವಳು ಇನ್ನೂ ನಾಚಿ ಕೆಂಪಾದಳು!

**ಸ್ಮಿತಾ ಜೋಶಿ**